ವರ್ಷಕ್ಕೊಮ್ಮೆ ಉಸಿರುಗಟ್ಟಿಸುವ ಬಿಗಿ ವಾತಾವರಣದಲ್ಲಿ ಪರೀಕ್ಷೆ ನಡೆಸಿ, ಕಲಿಕೆಯನ್ನು ದೃಢೀಕರಿಸುವ ವ್ಯವಸ್ಥೆ ಬದಲಾಗಬೇಕು. ರಚನಾತ್ಮಕ ಮೌಲ್ಯಮಾಪನದ ಮೂಲಕ ದೈನಂದಿನ ತರಗತಿ ಪ್ರಕ್ರಿಯೆಯ ಭಾಗವಾಗಿ ಮಕ್ಕಳಿಗೆ ಆತಂಕವುಂಟಾಗದ ಹಾಗೆ ಅವರ ಕಲಿಕೆಯ ಮಟ್ಟವನ್ನು ಅರಿಯುವಂತಾಗಬೇಕು.

# ತೆರೆದ ಪುಸ್ತಕ ಪರೀಕ್ಷೆ: ಸಾಧಕ–ಬಾಧಕಗಳು

ಪ್ರಾಥಮಿಕ ಶಿಕ್ಷಣದ ಸುಧಾರಣೆಗೆ ಸಂಬಂಧಿಸಿದಂತೆ ಇತ್ತೀಚೆಗೆ ವಿಷಯವೊಂದು ಹೆಚ್ಚಿನ ಚರ್ಚೆಗೆ ಗ್ರಾಸವಾಯಿತು. ಅದು ರಾಜ್ಯದ ನೂತನ ಶಿಕ್ಷಣ ಸಚಿವರ ಪ್ರಸ್ತಾವನೆಯಂತೆ, ವಿದ್ಯಾರ್ಥಿಗಳನ್ನು ಅಪನಂಬಿಕೆಯಿಂದ ಕಾಣುವ ಈಗಿನ ಪರೀಕ್ಷಾ ವ್ಯವಸ್ಥೆಯನ್ನು ಬದಲಿಸಿ, ಪ್ರಾಥಮಿಕ ಶಾಲೆಯ ಒಂದರಿಂದ ಐದನೆಯ ತರಗತಿವರೆಗೆ 'ತೆರೆದ ಪುಸ್ತಕ'ದ ಪರೀಕ್ಷೆ ವ್ಯವಸ್ಥೆಯನ್ನು ಪರಿಚಯಿಸುವ ಕುರಿತಾಗಿತ್ತು.

ಭಯಮುಕ್ತ ಕಲಿಕಾ ವಾತಾವರಣವನ್ನು ನಿರ್ಮಿಸಿ ಮಕ್ಕಳ ಸೃಜನಾತ್ಮಕತೆ ಹೆಚ್ಚಿಸಲು ಇಂಥ ಬದಲಾವಣೆಯು ನಾಂದಿಹಾಡುತ್ತದೆಂಬುದು ಈ ಆಲೋಚನೆಯ ಹಿಂದಿನ ಆಶಯವೆನಿಸುತ್ತದೆ. ವಿದ್ಯಾರ್ಥಿಗಳ ನೈಜ ಕಲಿಕೆಯ ಮಟ್ಟವನ್ನು ಅರಿಯುವ ದೃಷ್ಟಿಯಿಂದ ನೋಡಿದಾಗ ಈ ಕ್ರಮ ಸ್ವಾಗತಾರ್ಹವಾದುದು. ಆದರೆ ಇದನ್ನು ಜಾರಿಗೊಳಿಸುವ ಮುನ್ನ ಪ್ರಸ್ತುತ ಶಾಲಾ ವ್ಯವಸ್ಥೆಯಲ್ಲಿ ಜಾರಿಯಲ್ಲಿರುವ ಬೋಧನಾ–ಕಲಿಕೆ ಪ್ರಕ್ರಿಯೆ, ಮೌಲ್ಯಮಾಪನಾ ಪದ್ಧತಿ, ಶಿಕ್ಷಕರ ಮನಃಸ್ಥಿತಿಗಳಲ್ಲಿ ಕೆಲವು ಮಾರ್ಪಾಡುಗಳನ್ನು ತರಬೇಕಾಗುತ್ತದೆ. ಭಾಗೀದಾರರೊಂದಿಗೆ ಸಂವಾದವೂ ಸೇರಿದಂತೆ ನಿರ್ದಿಷ್ಟ ಪೂರ್ವಸಿದ್ಧತೆಗಳನ್ನು ಮಾಡಿಕೊಂಡು ಬದಲಾವಣೆಗೆ ಸೂಕ್ತ ವಾತಾವರಣ ನಿರ್ಮಿಸುವುದು ಅಗತ್ಯವೆನಿಸುತ್ತದೆ.

ಇಂಥ ಶೈಕ್ಷಣಿಕ ಸುಧಾರಣೆಗಳ ಅನುಷ್ಠಾನದ ಕೇಂದ್ರಭಾಗವಾಗಿರುವ ಶಿಕ್ಷಕರನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಬದಲಾವಣೆ ಪ್ರಕ್ರಿಯೆಯ ಆದ್ಯತೆಯಾಗಬೇಕು. ಮುಕ್ತ ಪರೀಕ್ಷಾ ಪದ್ಧತಿಯ ತಾರ್ಕಿಕ ಹಿನ್ನೆಲೆ, ಸಾಧಕ–ಬಾಧಕಗಳ ಬಗ್ಗೆ ಅವರು ತಳೆದಿರುವ ನಂಬಿಕೆಗಳನ್ನು ಪರೀಕ್ಷಿಸಿಕೊಳ್ಳುವಂತಾಗಬೇಕು. ಈ ಪ್ರಕ್ರಿಯೆಯಲ್ಲಿ ಎದುರಾಗುವ ಪ್ರಶ್ನೆಗಳನ್ನು ಜಿಜ್ಞಾಸೆಗೊಳಪಡಿಸಿ ಬಹುತೇಕ ಸವಾಲುಗಳಿಗೆ ಅವರೇ ಪರಿಹಾರ ಕಂಡುಕೊಳ್ಳುವಲ್ಲಿ ಶಿಕ್ಷಣ ಇಲಾಖೆಯು ಮುಂದಾಗಬೇಕು. ಮೇಲಿನಿಂದ ವಿಧಿಸುವ ಆದೇಶಗಳನ್ನು ಪಾಲಿಸಿ, ಬದಲಾವಣೆಯನ್ನು ಅನುಷ್ಠಾನಗೊಳಿಸುವುದಕ್ಕಷ್ಟೇ ಶಿಕ್ಷಕರನ್ನು ಸೀಮಿತಗೊಳಿಸದೆ ಇದರ ಹಿಂದಿನ ಸೈದ್ಧಾಂತಿಕ ಹಿನ್ನೆಲೆಯನ್ನು ಶಿಕ್ಷಕರು ಮನಗಾಣುವಂಥ ವಿಶ್ವಸನೀಯ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ. ಆಗಲೇ ಅವರು ವಿದ್ಯಾರ್ಥಿಗಳಿಗೆ ನಂಬಲರ್ಹ ಕಲಿಕಾ ವಾತಾವರಣವನ್ನು ನಿರ್ಮಿಸಬಲ್ಲರು.

ಇದಕ್ಕೆ ಪೂರಕವಾಗಿ ಬದಲಾವಣೆಯಾಗಬೇಕಾಗಿರುವ ಇನ್ನೊಂದು ಮುಖ್ಯ ಆಯಾಮವೆಂದರೆ, ಈ ಪರೀಕ್ಷಾ ವ್ಯವಸ್ಥೆಯ ಪ್ರತಿಬಿಂಬವಾಗಿರುವ ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಯ ನಮೂನೆಯಲ್ಲಿ ಆಗಬೇಕಾದ ಬದಲಾವಣೆ. ಇತ್ತೀಚಿನ ವರ್ಷಗಳ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ಭಾಷಾ ಪ್ರಶ್ನೆಪತ್ರಿಕೆಗಳನ್ನು ನಮ್ಮ ಸಂಸ್ಥೆಯ ಭಾಷಾ ಸಂಪನ್ಮೂಲ ತಂಡವು ವಿಶ್ಲೇಷಿಸಿತು. ಅದರಿಂದ, ಉರುಹೊಡೆದ ಮಾಹಿತಿಯಾಧಾರಿತ ಸುಲಭ ಕೌಶಲದ ಪ್ರಶ್ನೆಗಳಿಗೆ ಶೇ. 70ರಷ್ಟು ಆದ್ಯತೆ ನೀಡಲಾಗಿದೆ ಎನ್ನುವ ಅಂಶವು ಹೊರಹೊಮ್ಮಿತು. ಉನ್ನತ ಕೌಶಲಗಳಾದ ಸ್ವಂತ ಅಭಿವ್ಯಕ್ತಿ, ಕಲ್ಪನೆ, ತಾರ್ಕಿಕ ವಿಮರ್ಶೆ, ಅಮೂರ್ತ ಪರಿಕಲ್ಪನೆಗಳನ್ನು ಗ್ರಹಿಸಿ ಸ್ವಂತ ಮಾತುಗಳಲ್ಲಿ ಸರಳವಾಗಿ ವಿವರಿಸುವ ಪ್ರಶ್ನೆಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದವು. ಪ್ರೌಢಶಾಲಾ ಹಂತದಲ್ಲೇ ಪಠ್ಯಪುಸ್ತಕದಾಚೆಗೆ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಹೊರಜಗತ್ತಿನ ವಿಷಯಗಳನ್ನರಿಯಲು ಅತ್ಯಂತ ಕಡಿಮೆ ಅವಕಾಶಗಳಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಆಶಯದಂತೆ ವಿದ್ಯಾರ್ಥಿಗಳಲ್ಲಿ ಉನ್ನತ ಕೌಶಲಗಳನ್ನು ಬೆಳೆಸುವ ಪರಿಪಾಠವು ಪ್ರಾಥಮಿಕ ಶಾಲಾ ಹಂತದಲ್ಲೇ ಪ್ರಾರಂಭವಾಗಬೇಕು. ಈ ಹಿನ್ನೆಲೆಯಲ್ಲಿ ಯಾವುದೇ ವಿಷಯವನ್ನು ತರಗತಿಯಲ್ಲಿ ಬೋಧಿಸಿದರೂ ಆ ವಿಷಯವನ್ನು ಆಮೂಲಾಗ್ರವಾಗಿ ಅರಿಯುವಂತೆ ಮಾಡುವುದರಲ್ಲಿ ಶಿಕ್ಷಕರ ಪಾತ್ರವು ದೊಡ್ಡದು. ನೀರಿನ ರಾಸಾಯನಿಕ ಗುಣಲಕ್ಷಣಗಳನ್ನು ಕುರಿತು ಪಾಠ ಮಾಡುವ ವಿಜ್ಞಾನ ಶಿಕ್ಷಕರು ಕೆರೆಗಳ

ಮಾಲಿನ್ಯದ ಬಗ್ಗೆಯೂ, ಭೌಗೋಳಿಕ ಆಯಾಮದಿಂದಲೂ ಭಾಷಾಸ್ವರೂಪದ ದೃಷ್ಟಿಯಿಂದಲೂ ಸಂಯೋಜಿತ ರೀತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವಂತಾಗಬೇಕು. ವಿದ್ಯಾರ್ಥಿಗಳು ನೆಲೆಸಿರುವ ಹಳ್ಳಿ ಅಥವಾ ಪಟ್ಟಣದ ಹತ್ತಿರದ ಜಲತಾಣಗಳ ಬಗ್ಗೆ ಕಲೆಹಾಕಿದ ಮಾಹಿತಿಯನ್ನಾಧರಿಸಿ ಈ ವಿಷಯವನ್ನು ಅನ್ವಯಿಕವಾಗಿ ಬೋಧಿಸಬಹುದು. ಇಂಥ ಪರಿಣಾಮಕಾರಿ ಬೋಧನೆಯಲ್ಲಿ ತೊಡಗಲು ಶೈಕ್ಷಣಿಕ ಗುರಿಗಳು, ಕಲಿಕೆಯ ಪ್ರಕ್ರಿಯೆ, ವಿದ್ಯಾರ್ಥಿಗಳ ಸಾಮಾಜಿಕ ಹಿನ್ನೆಲೆ ಮತ್ತು ಅವರ ಸಾಮಾಜಿಕ-ಸಾಂಸ್ಕೃತಿಕ ಪರಿಸರಗಳ ಬಗೆಗಿನ ಸ್ಪಷ್ಟ ಕಲ್ಪನೆಯನ್ನು ಶಿಕ್ಷಕರು ಹೊಂದಿರಬೇಕು. ಜೊತೆಗೆ, ಆಳವಾದ ವಿಷಯಜ್ಞಾನ ಮತ್ತು ಬೋಧನಾ ವಿಧಾನಗಳ ತಿಳಿವಳಿಕೆಯನ್ನು ಪಡೆದಿರಬೇಕು.

ಇಂಥ ಆಸಕ್ತಿದಾಯಕ ಬೋಧನಾ-ಕಲಿಕೆ ಆಚರಣೆಯನ್ನು ವರ್ಷವಿಡೀ ಅಳವಡಿಸಿಕೊಂಡಾಗಲೇ ವಿದ್ಯಾರ್ಥಿಗಳ ಆಸಕ್ತಿ, ಕುತೂಹಲಗಳು ಗರಿಗೆದರುತ್ತವೆ. ಅದರಿಂದ ಅವರು ನಿರಂತರ ಕಲಿಕೆಯಲ್ಲಿ ತೊಡಗುವಂತಾಗುತ್ತದೆ. ವರ್ಷಕ್ಕೊಮ್ಮೆ ಉಸಿರುಗಟ್ಟಿಸುವ ಬಿಗಿ ವಾತಾವರಣದಲ್ಲಿ ಪರೀಕ್ಷೆ ನಡೆಸಿ, ಕಲಿಕೆಯನ್ನು ದೃಢೀಕರಿಸುವ ವ್ಯವಸ್ಥೆಯು ಬದಲಾಗಬೇಕು. ರಚನಾತ್ಮಕ ಮೌಲ್ಯಮಾಪನದ ಮೂಲಕ ದೈನಂದಿನ ತರಗತಿ ಪ್ರಕ್ರಿಯೆಯ ಭಾಗವಾಗಿ ಮಕ್ಕಳಿಗೆ ಆತಂಕ ಉಂಟಾಗದ ಹಾಗೆ ಅವರ ಕಲಿಕೆಯ ಮಟ್ಟವನ್ನು ಅರಿಯುವಂತಾಗಬೇಕು. ನಿರಂತರ, ವ್ಯಾಪಕ ಮೌಲ್ಯಮಾಪನದ ಉದ್ದೇಶ ಇದೇ ಆಗಿದೆ.

ನಾಲ್ಕು ದಶಕಗಳ ಹಿಂದೆಯೇ ಎಚ್. ನರಸಿಂಹಯ್ಯನವರು ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗ ಉಸ್ತುವಾರಿಯಿಲ್ಲದ ಪರೀಕ್ಷಾ ಕ್ರಮವನ್ನು ಕಾಲೇಜಿನಲ್ಲಿ ಪ್ರಯೋಗಿಸಿ ಸೈ ಎನಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಬೋಧಕ ವರ್ಗವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಜೊತೆಗೆ ವಿದ್ಯಾರ್ಥಿ ಸಮುದಾಯದ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಿ ಪೂರಕ ವಾತಾವರಣ ಸೃಷ್ಟಿಸುವಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಿದ್ದರು.

ಶಿಕ್ಷಕರಲ್ಲಿ, ಇಲಾಖೆ ಅಧಿಕಾರಿಗಳಲ್ಲಿ, ಭಾಗೀದಾರರಲ್ಲಿ ಪರಸ್ಪರ ನಂಬಿಕೆಯ ವಾತಾವರಣವನ್ನು ಸೃಷ್ಟಿಸಿ, 'ತೆರೆದ ಪುಸ್ತಕ'ದಂತಹ ಪರೀಕ್ಷಾ ಕ್ರಮದ ಜಾರಿಗೆ ಶಿಕ್ಷಣ ಇಲಾಖೆಯು ಮುಂದಾಗುವುದು ಒಳಿತು.

■

ಆಂದೋಲನ, 27-06-2018